ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಟಿ. ಸಿ. ಬಸಪ್ಪ.—ಅಂದ ಮೇಲೆ ಇದಕ್ಕೆ ಇಷ್ಟು ಕಡಮೆ ಕೆರೆಗಳನ್ನು ಜೀರ್ಣೋದ್ಧಾರ ಮಾಡಲು ಕಾರಣ ಗಳನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮೊದಲೇ ಕೇಳಿದ್ದರೆ ತಿಳಿದುಕೊಳುತ್ತಿದ್ದೆನೆ ; ವಿಚಾರಣೆ ಮಾಡುತ್ತೇನೆ.

ಶ್ರೀ ಟಿ. ಸಿ. ಬಸಪ್ಪ.—ಏನು ಕಾರಣ ಇಷ್ಟು ನಿಧಾನಕ್ಕೆ ಎಂಬುದನ್ನು ತಿಳಿದುಕೊಳ್ಳುವುದು ಕರ್ತವ್ಯವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೇ ಒಂದೇ ವರ್ಷದಲ್ಲಿ ಐದು ಕೆರೆಗಳನ್ನು ಮಾಡಿದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—(ಡಿ) ಭಾಗದ ಉತ್ತರದಲ್ಲಿ ಇಪ್ಪತ್ತೆಂಟು ಅಂದಾಜುಗಳು ತಯಾರಾಗಿ ಪೆಂಡಿಂಗ್ ಆಗಿವೆ ಎಂದು ತಿಳಿಸಿದೆ. ಇವು ಸುಮಾರು ಮೂರು ನಾಲ್ಕು ವರ್ಷಗಳಿಂದಲೂ ಪೆಂಡಿಂಗ್ ಆಗಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವಿವೆ. ಕೆಲವು ಸಂದರ್ಭಗಳಲ್ಲಿ ರೈತರು ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಮುಚ್ಚಳಿಕೆ ಬರೆದುಕೊಡುವುದು ತಡವಾಗುತ್ತದೆ, ಕೆಲವು ಸಂದರ್ಭಗಳಲ್ಲಿ ಅಂದಾಜುಮಂಜೂರಾಗುವುದು ತಡವಾಗುತ್ತದೆ. ಹೀಗೆ ನಾನಾ ಕಾರಣಗಳಿರುತ್ತವೆ.

ಶ್ರೀ ಟಿ. ಸಿ. ಬಸಪ್ಪ.—ಮುಚ್ಚಳಿಕೆ ತೆಗೆದುಕೊಂಡರೂ ಎಗ್ಸಿಕ್ಯೂಟಿವ್ ಇಂಜಿನಿಯರ ಕಚೇರಿಯಲ್ಲಿ ಬಹಳ ನಿಧಾನವಾಗಿದೆಯಲ್ಲವೆ ?

Mr. SPEAKER.—They are all general questions.

ಶ್ರೀ ಟಿ. ಸಿ. ಬಸಪ್ಪ.—ಎಗ್ಸಿಕ್ಯೂಟಿವ್ ಇಂಜಿನಿಯರ ಕಚೇರಿಯಲ್ಲಿ ಇದನ್ನೆಲ್ಲಾ ಜಾಗ್ರತೆ ಮಾಡಲು ಸಾಕಷ್ಟು ಸಿಬ್ಬಂದಿ ಇಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

Sri KADIDAL MANJAPPA.—There is adequate staff.

ಶ್ರೀ ಟಿ. ಸಿ. ಬಸಪ್ಪ.—ಅದಷ್ಟು ಜಾಗ್ರತೆ ಅಂದಾಜು ಮಂಜೂರಾಗುವುದಕ್ಕೆ ಹೆಚ್ಚು ಆನಕ್ಕೆ ವಹಿಸಲು ಸಾಧ್ಯವೆ ?

Sri KADIDAL MANJAPPA.—It is understood.

ಶ್ರೀ ಟಿ. ಸಿ. ಬಸಪ್ಪ.—ಶಾಂತಿಪುರ ಅಣೆಕಟ್ಟು ಮತ್ತು ಬೂದಿಗುಪ್ಪೆ ಅಣೆಕಟ್ಟು ಇವುಗಳನ್ನು ಜೀರ್ಣೋದ್ಧಾರ ಮಾಡಬೇಕೆಂದು ಬಹಳ ದಿವಸಗಳಿಂದ ಜನರಿಂದ ಮನವಿಗಳು ಬರುತ್ತಿವೆಯಲ್ಲವೆ ?

Sri KADIDAL MANJAPPA.—I cannot give the definite period, Sir.

ಶ್ರೀ ಟಿ. ಸಿ. ಬಸಪ್ಪ.—I am not asking for the definite period. ಬಹಳ ದಿವಸಗಳಿಂದ ಕೇಳುತ್ತಿದ್ದಾರಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಟಿ. ಸಿ. ಬಸಪ್ಪ.—ಅದಷ್ಟು ಜಾಗ್ರತೆ ಮಾಡಿಸುತ್ತೀರಾ ?

Mr. SPEAKER.—It is obvious.

Sri KADIDAL MANJAPPA.—So far as the Budiguppa *anicut* is concerned, an estimate for the work has been called for.

Restoration of tanks in Srinivasapur Taluk.

Q.—71. Sri G. NARAYANA GOWDA (Mulbagal-Srinivaspur).—

Will the Government be pleased to state :—

(*a*) the number of minor and major unrestored tanks in Srinivaspur Taluk ;

(*b*) the names of minor and major unrestored tanks in Srinivaspur Taluk that the Goverument have taken up or intend taking up for restoration this year ?

A.—Sri KADIDAL MANJAPPA (Minister for Revenue and Public Works).—

	No. of Tanks
(*a*) Minor tanks ..	214
Major tanks ..	3
(*b*) Tanks taken up for restoration this year.—	
Minor ..	17
Major ..	3
Desilting (minor tanks) (earthwork only).	68
Total ..	88

ಶ್ರೀ ಜಿ. ನಾರಾಯಣಗೌಡ.—68 ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡಿಲ್ಲ, ಮಟ್ಟಿ ಕಾಮಗಾರಿ ಮಾತ್ರ ಮಾಡಿದ್ದೇವೆ ಎಂದು ತಿಳಿಸಿದಾಗಿದೆ, ಉಳಿದ ಕಾಮಗಾರಿ ಯಾವಾಗ ಮಾಡಿಸುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಹಣ ಒದಗಿದ ಹಾಗೆಲ್ಲಾ ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡ.—ಬೇಗ ಮಾಡದಿದ್ದರೆ, ಮಾಡಿರುವ ಮಟ್ಟಿ ಕಾಮಗಾರಿಯಿಂದ ಪ್ರಯೋಜನ ವಾಗುವುದಿಲ್ಲವೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೇನೇನು ಕೆಲಸ ಆಗಬೇಕೆಂಬ ಆವಶ್ಯಕತೆಯ ಮೇಲೆ ಅವಲಂಬಿಸಿದೆ. ಪೂರಾಗಿ ಆಗಬೇಕಾದುದನ್ನು ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡ.—ಆವಶ್ಯಕತೆ ಏನೆಂಬುದನ್ನು ಇರಾಖೆಯವರು ತಿಳಿಸಿದರೆ ?

. ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಇನ್ನೂ ತಿಳಿಸಿಲ್ಲ. ಕೋರಾರ ಜಿಲ್ಲೆಯಲ್ಲ ಆಗಿರುವಷ್ಟು ಕೆರೆಗಳ ಕೆಲಸ ಇನ್ನೆಲ್ಲಿಯೂ ಆಗಿಲ್ಲ.

ಶ್ರೀ ಜಿ. ನಾರಾಯಣಗೌಡ.—ರೆಸ್ಪೋನ್ಸಿಬಲ್ ಕಾಮಗಾರಿ ತಾನೆ ಮಾಡಿರುವುದು ?

Mr. SPEAKER.—88 tank works have been executed in Srinivasapur Taluk.

Restoration of tanks in Mulbagal Taluk.

Q.—72. Sri G. NARAYANA GOWDA :(Mulbagal—Srinivaspur).—

Will the Government be pleased to state :—

(*a*) the number of minor and major unrestored tanks in Mulbagal Taluk ;

(*b*) the names of minor and major unrestored tanks in Mulbagal Taluk that the Government have taken up or intend taking up for restoration this year ?

A.—Sri KADIDAL MANJAPPA (Minister for Revenue and Public Works).—

(*a*) Minor tanks	..	267
Major tanks	..	4
Total	..	271
(*b*) Minor tanks	..	14
Major tanks	..	1
By desilting (earth-work only)	..	90
Total	..	105

ಶ್ರೀ ಜಿ. ನಾರಾಯಣಗೌಡ.—ಮುಳಬಾಗಲು ತಾಲ್ಲೂಕಿನಲ್ಲಿ ನಾಲ್ಕು ಮೇಜರ್ ಕೆರೆಗಳು ಜೀರ್ಣೋದ್ಧಾರವಾಗದೆ ಬಹಳ ವರ್ಷಗಳಿಂದ ಹಾಗೆಯೇ ಇವೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ವರ್ಷ ಎಂದು ಹೇಳಲು ಸಾಧ್ಯವಿಲ್ಲ .....

Mr. SPEAKER.—One of them is restored as per answer given to (*b*).

ಶ್ರೀ ಜಿ. ನಾರಾಯಣಗೌಡ.—ಒಂದನ್ನು ಮಾಡುತ್ತಿದ್ದಾರೆ ; ಇನ್ನು ಮೂರು ಕೆರೆಗಳ ಕೆಲಸವನ್ನು ಮುಂದಿನ ವರ್ಷ ತೆಗೆದುಕೊಳ್ಳುತ್ತೀರಾ ?

Sri KADIDAL MANJAPPA.—I cannot give definite assurance ; we will try.

New Irrigation Works in Kanakapura Taluk.

Q.—92. Sri S. KARIAPPA (Virupakshapura).—

Will the Government be pleased to state :—

(*a*) the new irrigational works proposed to be taken up in Kanakapura Taluk ;

(*b*) the various stages at which each of them at present stands ?

A.—Sri KADIDAL MANJAPPA (Minister for Revenue and Public Works).—

(*a*) and (*b*)—

Sl. No.	Name of work	Amount of estimate	Remarks
	RESTORATION OF TANKS	Rs.	
1	Restoring Thippiayanakere of Hosadurga Village.	13,400	Estimate is forwarded to Assistant Engineer, Kanakapura, for conducting an enquiry under Irrigation Act.
2	Restoring Kapinaialnakere, Hosadurga Village.	9,200	Sent to Superintending Engineer for sanction.
3	Restoring Alur Tank (breached)	18,800	Do do do
4	Restoring Thotahalli Uppukere ..	15,900	Returned to Assistant Engineer, Kanakapura, for attending to certain observations.
5	Restoring Atchalu Rayanakere ..	5,800	Eestimate sanctioned and work under progress
6	Restoring Kotehosahalli Tank ..	22,600	Returned to Assistant Engineer for attending to certain observations.
7	Restoring Koonur Doddakere ..	7,800	Do do do
8	Restoring Atchaganahalli tank ..	42,600	Do do do
9	Restoring Hunasanahalli Urumundinakere.	3,740	Returned to Assistant Engineer for conducting enquiry under the Irrigation Act.
10	Restoring Horalagal Hosagere ..	44,000	Returned to the Assistant Engineer for attending to certain observations.
11	Restoring Sulikere	12,250	Returned to the Assistant Engineer for conducting enquiry under the Irrigation Act.
12	Restoring Mallegowdanakere ..	7,200	Do do do
13	Restoring Gabbadi Gangannakere	5,200	Do do do
14	Restoring Ganalukere	13,500	Do do do